ಅಂತರಂಗದಿಂದ ಮರೆಯಾಗಲಿಲ್ಲ. ಸಹೋದ್ಯೋಗಿಗಳಲ್ಲೇ ಆಪ್ತರನ್ನು ವಿಚಾರಿಸುತ್ತ 'ಫೇಸ್‌ಬುಕ್'ನಲ್ಲಿ ತಡಕಾಡಿದರು. ಸಿಕ್ಕದ್ದು ರಾಧೇಶ್ಯಾಮ್ ಮತ್ತು ಘನಶ್ಯಾಮ್ ಮಾತ್ರ. ಅದರಲ್ಲಿ ಘನಶ್ಯಾಮ್ ಅಮೆರಿಕದಲ್ಲಿದ್ದ. ಮತ್ತೆ ಮರುದಿನ ಅದೇ ಕೆಲಸ. ಪರಿಣಾಮ ಸೊನ್ನೆ. ಮರುದಿವೂ ಕಥೆ ಮರುಕಳಿಸಿದಾಗ ಅವರ ಪರದಾಟ ನೋಡುತ್ತಿದ್ದ ಒಬ್ಬ ಡೆವಲಪರ್ 'ಆ ಕಂಪನೀಲಾ ಸರ್, ಶ್ಯಾಮ್ ಅಂದ್ರೆ ಶ್ಯಾಮಸುಂದರ. ಗೊತ್ತು ಬಿಡಿ ಸರ್. ಮಹಾ ಕಿರಿಕ್ಕು. ಅವನ ಕಾಟ ತಾಳಲಾರದೇ ನಾನು ಆ ಕಂಪನಿ ಬಿಟ್ಟು ಬಂದು ಇಲ್ಲಿ ಸೇರಿದೆ. ಅವನಿಗೆ ಒಟ್ಟು ಕೆಲಸವಾಗಬೇಕು. ಅದೂ ನಿಗದಿತ ಸಮಯಕ್ಕಿಂತ ಮುಂಚೆಯೇ ಒಪ್ಪಿಸಿಬಿಡಬೇಕು. ನಿಮಗೆ ಗೊತ್ತಿದೆಯೋ ಇಲ್ಲವೋ ಏನೂ ನೋಡಲ್ಲ. ಹೇಳಿಕೊಡಲ್ಲ. ನಾಲ್ಕು ವರ್ಷ ಕಾಲೇಜಿನಲ್ಲೇನು ಮಣ್ಣು ಹೊರ್ತೀರಾ? ಅಂತ ಕೇಳ್ತಾನೆ. ಆದರೆ ನಿಮಗೇ ಗೊತ್ತಿದೆಯಲ್ಲ ಸರ್.. ..ಕಾಲೇಜಿನಲ್ಲಿ ನಾವು ಕಲಿಯುವದಕ್ಕೂ ಇಲ್ಲಿ ಕೆಲಸ ಮಾಡುವದಕ್ಕೂ ಅಜಗಜಾಂತರವಿದೇಂತ. ಅವನ ಪ್ರಾಜೆಕ್ಟಿಗೆ ಗೊತ್ತಿದ್ದವರು ಹೋಗಲ್ಲ. ಹೋದವರ್ಯಾರೂ ನಿಲ್ಲಲ್ಲ' ಎಂದ.

'ಓ..ಇದು ಕೆ.ಟಿ. ಪ್ರಾಬ್ಲೆಮ್'ಎಂದರಿವಾಯ್ತು ಪ್ರಸಾದ್ಗೆ. ಪುನಃ ಫೇಸ್‌ಬುಕ್‌ನ ಮೊರೆ ಹೋಗಿ ಅವನ ಪ್ರೊಫೈಲ್ ತೆರೆದರು. ಪರಿಚಿತವೆನಿಸಿತು ಮುಖ. ನೋಡಿದ್ದು ಎಲ್ಲಿಂತ ನೆನಪಾಗಲಿಲ್ಲ. ಇಪ್ಪತ್ತೈದು ವರ್ಷಗಳ ಸರ್ವೀಸಿನಲ್ಲಿ ಬಂದು ಹೋದವರೆಷ್ಟೋ.. ಲೆಕ್ಕವಿಲ್ಲ. ಸಾಫ್ಟ್‌ವೇರ್ ಇಂಡಸ್ಟ್ರಿಯಲ್ಲಿ ಇದೊಂದು ಸಮಸ್ಯೆಯೇ. ಕಾಲೇಜಿನಲ್ಲಿ ಕಲಿಯುವುದೇ ಬೇರೆ. ಪ್ರಾಜೆಕ್ಟುಗಳಲ್ಲಿ ಅಳವಡಿಸುವುದೇ ಬೇರೆ. ಸಾಮ್ಯತೆ ಕಡಿಮೆ. ಅದೇ ವಿಷಯವಾದರೂ ಮುಂದುವರೆದ ತಂತ್ರಜ್ಞಾನ. ಸದಾ ಕಂಪ್ಯೂಟರ್‌ನ ಹೊಸ ಭಾಷೆ, ಹೊಸ ತಂತ್ರಜ್ಞಾನಗಳನ್ನು ಕಲಿಯುತ್ತಲೇ ಇರಬೇಕು. ಒಂದೊಂದು ಪ್ರಾಜೆಕ್ಟು ವಿಭಿನ್ನ. ಕೆಲ ಮ್ಯಾನೇಜರ್‌ಗಳು ಹೊಸದಾಗಿ ಸೇರಿದ ಹುಡುಗರಿಗೆ ಕೆಲಸ ಹೇಳಿಕೊಡುತ್ತಾರೆ. ಪಕ್ಕ ಕುಳಿತು ಕಲಿಸಿಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಾರೆ. ಆದರೆ ಇಂಥವರ ಸಂಖ್ಯೆ ಗಣನೀಯವಾಗಿ ಕಡಿಮೆ. ಟಾರ್ಗೆಟ್ ಕೊಟ್ಟು ಮೂರು ದಿನದಲ್ಲಿ ಮುಗಿಸಿ ಡೆಲಿವರಿ ಮಾಡಿ ಎಂದು ಆದೇಶಿಸುವವರೇ ಜಾಸ್ತಿ. ಕೆಲಸ ಗೊತ್ತಿಲ್ಲವೆಂದರೆ ಅದು ನಮ್ಮ ಸಮಸ್ಯೆಯಲ್ಲ. ಎಲ್ಲಿಂದಾದರೂ ಕಲಿಯಿರಿ. ಕೆಲಸ ಮುಗಿಸಿ ತಂದೊಪ್ಪಿಸಿ ಎನ್ನುವ ಆರ್ಡರ್. ನಾಲೆಡ್ಜ್ ಟ್ರಾನ್ಸಫರ್ ಮಾಡುವವರು ಕಡಿಮೆ ಎಂಬ ದೂರು ಇಂದಲ್ಲ ಎಂದಿನಿಂದಲೋ ಕೇಳಿಬರುತ್ತಿದೆ. ಮೃದು ಮನದ ಪ್ರಾಮಾಣಿಕ ಕೆಲಸಗಾರರು ಒದ್ದಾಡುತ್ತಲಾದರೂ  ದುಡಿಯುತ್ತಾರೆ. ಕೊಂಚ ಸರ್ವೀಸಾದ ಉಡಾಫೆ ಹುಡುಗರು ಹೇಳದೇ ಕೇಳದೇ ರಜೆ ಹಾಕಿ ಹೋಗಿಬಿಡುತ್ತಾರೆ. ಇಲ್ಲವಾದರೆ ತಂದೆಗೆ ಹುಶಾರಿಲ್ಲ, ತಾಯಿಗೆ ಆಪರೇಷನ್, ತನಗೇ ಹೊಟ್ಟೆನೋವು ಮುಂತಾದ ತೊಂದರೆಗಳನ್ನು ಹೇಳಿಕೊಂಡು ಒಂದು ಮೇಲ್ ಕಳಿಸಿ ಸರಿಯಾಗಿ ತಿರುಮಂತ್ರ ಹಾಕುತ್ತಾರೆ. ಆದರೆ ಕೆಲಸ ಕಲಿಯಬೇಕು, ಕಲಿತು ಸೈ ಎನಿಸಿಕೊಂಡು ಮೇಲೇರಬೇಕು ಎಂದು ತುಡಿಯುವವರಿಗೆ ಈ ಸಮಸ್ಯೆ ಅಟ್ಟಾಡಿಸಿಬಿಡುತ್ತದೆ.

ಸಂಜೆ ಸುಗುಣಳ ಕಣ್ಣು ಯಕ್ಷಗಾನದಲ್ಲಿ ನೆಟ್ಟಿದ್ದರೂ ಮನ ಏನೋ ಯೋಚಿಸುತ್ತಿತ್ತು. ಮಂತ್ರಿ ದುರ್ಬುದ್ಧಿ ಚಂದ್ರಹಾಸನಿಂದಲೇ ಕಪ್ಪ ಕಾಣಿಕೆಯನ್ನು ತೆಗೆದುಕೊಂಡು ಅವನನ್ನು ಕೊಲ್ಲಬೇಕೆಂಬ ವಿಷಯವುಳ್ಳ ಪತ್ರವನ್ನು ಬರೆದು ಅದನ್ನು ತನ್ನ ಮಗನಿಗೆ ತಲುಪಿಸಲು ಅವನಿಗೇ ಹೇಳಿ ಕಳಿಸಿಯಾಗಿತ್ತು. ಚಂದ್ರಹಾಸ ರಂಗದಿಂದ ನಿರ್ಗಮಿಸುವಾಗಲೇ ಪ್ರಸಾದ್ ಬಂದರು. ಅಂದು ನಡೆದ ಬೆಳವಣಿಗೆಗಳ ಬಗ್ಗೆ ಸುಗುಣಳೊಂದಿಗೆ ಚರ್ಚಿಸಿದರು. ಇಬ್ಬರೂ ಕುಣಾಲ್‌ಗಾಗಿ ಕಾಯ್ದರು. ಅವನು ಬಂದಿದ್ದೇ ಹನ್ನೊಂದು ಗಂಟೆಗೆ. ಅವನಿಗೆ ಊಟ ಬಡಿಸಿ ಮೆಲ್ಲನೆ ವಿಷಯಕ್ಕೆ ಬಂದಳು ಸುಗುಣ. ಪ್ರಸಾದ್ ಮಾತು ತೆಗೆದರು.

ಕುಣಾಲ್ ನಿಧಾನವಾಗಿ 'ನಮ್ಮ ಮ್ಯಾನೇಜರ್ ಶ್ಯಾಮಸುಂದರ್ ಅಂತ. ಹದಿನೈದು ವರ್ಷ ಸರ್ವೀಸಾಗಿದೆ ನಮ್ಮ ಕಂಪನೀಲಿ. ತಮಗೆಲ್ಲ ಗೊತ್ತಿದ್ದರೂ ಏನೂ ಹೇಳಿಕೊಡಲ್ಲ. ಎಲ್ಲ ಕಲಿತು ಮಾಡಬೇಕಂತೆ. ಬರೀ ಟಾರ್ಗೆಟ್ ಕೊಡೋದೇ. ಆರು ಗಂಟೆಗೆ ಇನ್ನೇನು ನಾವು ಹೊರಡಬೇಕು ಅನ್ನೋವಾಗಲೇ ಮೀಟಿಂಗ್ ಕರೆದುಬಿಡ್ತಾರೆ. ಅದನ್ನು ಮುಗಿಸಿ ಅವರು ಹೇಳಿದ ಕೆಲಸ ಮಾಡಿ ಬರೋಕೆ ಇಷ್ಟೊತ್ತಾಗುತ್ತೆ. ಉಳಿದವರಿಗೆ ಸ್ವಲ್ಪನಾರೂ ಪರವಾಗಿಲ್ಲ. ನನ್ನ ಕಂಡರೆ ಪರಮ ವೈರಿನ್ನ ಕಂಡ ಹಾಗೆ ಸಿಡುಕ್ತಾರೆ. ಸರಿ ಇದ್ರೂ ತಪ್ಪು ಅಂತಾರೆ. ಮತ್ತೆ ಮಾಡು ಅಂತಾರೆ. ಒಟ್ಟಿನಲ್ಲಿ ಈ ಪ್ರಾಜೆಕ್ಟ್ ಮುಗಿದ್ರೆ ಸಾಕು ಅನ್ನಿಸ್ತಿದೆ. ನನ್ನ ಫ್ರೆಂಡ್ ಒಬ್ಬನು ಬಿಟ್ಟೇ ಹೋದ...' ಎಂದು ಬಾಯ್ಬಿಟ್ಟ. 'ನಿನಗೇನು ತಿಳಿಯಲ್ಲಾ ಅದನ್ನ ನನ್ನ ಕೇಳಬಾರ್ದನೋ.. ..ನೀಟಾಗಿ ಹೇಳ್ಕೊಡ್ತೀನಿ. ಅವನ್ನೇನು ಕೇಳೋದು' ಎಂದು ಪ್ರಸಾದ್ ತುಸು ಖಾರವಾಗೇ ಪ್ರತಿಕ್ರಿಯಿಸಿದರು. ಅಡ್ಡಡ್ಡ ತಲೆಯಾಡಿಸುತ್ತ ಕುಣಾಲ್ 'ಕೇಳಬಹುದು ಅಪ್ಪ. ಆದರೆ ಹೊಸ ಹೊಸ ಕಂಪ್ಯೂಟರ್ ಲ್ಯಾಂಗ್ವೇಜುಗಳು ನಿನಗೂ ಕಷ್ಟ ಅಲ್ವಾ? ಅಲ್ಲದೇ ಅವರು ಸ್ವಲ್ಪ ಹೇಳಿಕೊಟ್ಟರೂ ಸಾಕು, ನಾವು ಮಾಡ್ತೀವಪ್ಪ. ನಮಗೆ ಕಲಿಸಿ ನಮ್ಮಿಂದ ಕೆಲಸ ತೆಗೆದುಕೊಳ್ಳೋದು ಅವರ ಧರ್ಮ ತಾನೇ...' ಎಂದವನ ಮಾತಿಗೆ ಇಬ್ಬರ ಬಾಯಿ ಕಟ್ಟಿತು. 'ನಾನು ಏನೂ ಬರದವನಲ್ಲ. ಕಲಿಯುವ ಆಸಕ್ತಿ ಇರದವನಲ್ಲ. ಈಗ ಹೊಸದಾಗಿ ಬಂದಿರೋ ಕ್ಲೌಡ್ ಮೌಂಟಿಂಗ್ ಕೂಡ ಮಾಡ್ಕೊಂಡಿದೀನಿ. ಆದರೆ ಈ ರೀತಿ ಆರೋಗಂಟಾಗಿ ವರ್ತಿಸಿದರೆ ಹೇಗೇಂತ.. ..ನಾವು ಎಚ್.ಆರ್.ನವರಿಗೂ ಹೇಳಿದ್ದೀವಿ. ಅವರು 'ಮಾತಾಡ್ತೀವಿ' ಎಂದಿದ್ದಾರೆ. ನೋಡೋಣ ಎಂದು ಹೇಳಿಕೊಂಡ. ಮನದಂಗಳವನ್ನೆಲ್ಲಾ ತೆರೆದಿಟ್ಟು ಮಾತನಾಡಿದ್ದಕ್ಕೆ ಅವನಿಗೂ ಹೃದಯ ಹಗುರವೆನಿಸಿತು. ಆತಂಕಪಡುತ್ತಿದ್ದ ಸುಗುಣಳನ್ನು ಪ್ರಸಾದ್ 'ಇವೆಲ್ಲ ಮಾಮೂಲು. ಸರಿಹೋಗುತ್ತೆ. ಸುಮ್ನಿರು' ಎಂದು ಸಂತೈಸಿದರು.

ಎಂಟು ದಿನಗಳು ಕಳೆದರೂ ಅದೇ ಪರಿಸ್ಥಿತಿ. ದುಗುಡ ಕಳೆಯಲಿಲ್ಲ. ಕಾರ್ಮೋಡ ಚದುರಲಿಲ್ಲ. ಕುಣಾಲ್ ಬೆಳಗಾಗೆದ್ದು ಓಡಿದರೆ ರಾತ್ರಿಯೋ ಮಧ್ಯರಾತ್ರಿಯೋ ಮನೆ ಕಾಣುತ್ತಿದ್ದ. ಅವನನ್ನು ಈ ರೀತಿ ನೋಡುವುದೇ ಸುಗುಣಳಿಗೆ ಕಷ್ಟವಾಗಿತ್ತು. ಇವುಗಳ ನಡುವೆ ಯಕ್ಷಗಾನ ಮನಸ್ಸಿಗೆ ಕೊಂಚ ತಂಪೆರೆಯುತ್ತಿತ್ತು. ಚಂದ್ರಹಾಸ ಪತ್ರ ಕೊಡಲು ಬರುವಾಗ ಒಂದು ಸುಂದರ ಉದ್ಯಾನವನ್ನು ಕಂಡು ಮುದಗೊಂಡು ನರ್ತಿಸಿ ವಿಶ್ರಮಿಸುತ್ತಾ ತಂಗಾಳಿಗೆ ನಿದ್ದೆಹೋದ. ಅಲ್ಲಿಗೆ ಬಂದ ಮಂತ್ರಿ ದುರ್ಬುದ್ಧಿಯ ಮಗಳು ವಿಷಯೆ ಅವನನ್ನು ಕಂಡು ಮೋಹಗೊಂಡಳು. ಅವಳ ನೃತ್ಯ, ಹಾವ ಭಾವಗಳೂ ಅದ್ಭುತವಾಗಿದ್ದವು. ಮೆಲ್ಲನೆ ಅವನ ವಸ್ತ್ರಗಳಿಗೆ ಕಟ್ಟಿದ್ದ ಪತ್ರವನ್ನು ಕುತೂಹಲದಿಂದ ಬಿಚ್ಚಿ ನೋಡಿದಳು. ಪತ್ರ ತನ್ನ ತಂದೆಯದೇ ಎಂದು ತಿಳಿದು ಓದಿದಾಗ 'ಈ ಪತ್ರ ತಂದವರಿಗೆ ಹೊತ್ತುಕಳೆಯದೇ ವಿಷವನ್ನು ಕೊಡು' ಎಂದಿದ್ದನ್ನು ನೋಡಿ ಆಶ್ಚರ್ಯಚಕಿತಳಾದಳು. ಇಂಥ ಸುಂದರಾಂಗ ರಾಜಕುಮಾರನಿಗೆ ವಿಷವೇ? ಎಲ್ಲೋ ಅವಸರದಲ್ಲಿ ತನ್ನ ತಂದೆಯಿಂದ ಕಣ್ತಪ್ಪಾಗಿರಬೇಕೆಂದು ಭಾವಿಸಿ 'ವಿಷ' ಕ್ಕೆ ಬದಲಾಗಿ 'ವಿಷಯೆಯನ್ನು' ಎಂದು ತಿದ್ದಿ ನಿರ್ಗಮಿಸಿದಳು. ಪ್ರಸಾದ ಬರುವುದಕ್ಕೂ ಕಾರ್ಯಕ್ರಮ ಮುಗಿಯುವದಕ್ಕೂ ಸರಿಯಾಯಿತು. ಗಂಡ, ಹೆಂಡತಿ ಊಟ ಮುಗಿಸಿ ಮಗನಿಗಾಗಿ ಕಾಯುತ್ತಿದ್ದರು. ಶುಕ್ರವಾರ ವೀಕೆಂಡ್ ಬೇರೆ. ಪ್ರಸಾದ್ ನೆಪಮಾತ್ರಕ್ಕೆ ಟಿ.ವಿ.ಯ ಮುಂದೆ ಕುಳಿತಿದ್ದರೆ ಸುಗುಣ ಕಿಟಕಿಯಲ್ಲೇ ನೋಡುತ್ತ ಮಗನ ದಾರಿ ಕಾಯುತ್ತಿದ್ದಳು. ಆಗಲೇ ಯಾರೋ ಕುಣಾಲ್‌ನನ್ನು ಆಟೋದಿಂದ ಇಳಿಸಿ ಹೋದರು. ತೂರಾಡುತ್ತಲೇ ಬಂದವ ಬೆಲ್ ಮಾಡಿದ. ಗಾಬರಿಯಿಂದ ಬಾಗಿಲು ತೆರೆದ ಸುಗುಣಳಿಗೆ ಬಿಯರ್‌ನ ವಾಸನೆ ಮೂಗಿಗೆ ರಾಚಿ ಹೊಟ್ಟೆ ತೊಳಸುವಂತಾಯಿತು.

'ಏನೋ ಕುಣಾಲ್ ಇದೂ?' ಎಂದವಳು ಕೂಗಿದ್ದೇ ಪ್ರಸಾದ್ ಓಡಿ ಬಂದರು. ಅವನ ಕೈ ಹಿಡಿದುಕೊಂಡು ಸೋಫಾದ ಮೇಲೆ ಕೂರಿಸಿದರು. ಎಂದೂ ಡ್ರಿಂಕ್ಸ್ ಮುಟ್ಟದ ಮಗ ಇಂದು ಕುಡಿದು ಬಂದನೆಂದರೆ ಇಬ್ಬರ ಜೀವ ವಿಲವಿಲನೆ ಒದ್ದಾಡಿತು. ಪ್ರಸಾದ್ ಇಷ್ಟು ದಿನಗಳಿಂದ ಇಂಡಸ್ಟ್ರಿಯಲ್ಲಿದ್ದರೂ ಎಂದೂ ಡ್ರಿಂಕ್ಸ್, ಸಿಗರೇಟು ಮುಟ್ಟಿದವರಲ್ಲ. ಅಷ್ಟರಲ್ಲೇ ಕುಣಾಲ್ ಜೋರಾಗಿ 'ಏನಂತ ತಿಳಿದಿದ್ದಾನವನು? ಎಲ್ಲರ ಮುಂದೆ ನನ್ನ ಅವಮಾನ ಮಾಡ್ತಾನೆ ಮೀಟಿಂಗ್‌ನಲ್ಲಿ. ಕೆಲಸ ಬರಲ್ಲಾಂತ ಹಂಗಿಸ್ತಾನೆ. ಏನ್ಮಾಡಿದ್ರೂ ತಪ್ಪು ಹುಡುಕ್ತಾನೆ. ನಾನೇನೋ ನೀವು ಹೇಳಿದ್ದಕ್ಕೆ ಮೊದಲ ಕಂಪನೀನ ಎರಡ್ಮೂರು ವರ್ಷ ಬಿಡಬಾರ್ದೂಂತಿದ್ದೆ. ಇನ್ನು ಸಾಧ್ಯವಿಲ್ಲಾಪ್ಪ. ಅವನ ಕೈ ಕೆಳಗೆ ನಾನು ಕೆಲಸ ಮಾಡಲ್ಲ. ಬೇರೆ ನೋಡ್ಕೋತೀನಿ. ಅವನೇನಾದ್ರೂ ಮಾಡ್ಕೊಂಡು ಹಾಳಾಗಿ ಹೋಗ್ಲಿ. ತಿಂದ್ರೂ ಕಷ್ಟ. ವಾಶ್ ರೂಮಿಗ್ಹೋದ್ರೂ ಕೆಂಗಣ್ಣು ಬಿಡ್ತಾನೆ. ನನ್ನ.. ನನ್ನ.. ..ಎನಿಮಿ ಥರಾ ಟ್ರೀಟ್ ಮಾಡ್ತಾ ಇದಾನೆ...' ಎಂದು ಕೂಗಾಡಿ ನಂತರ ಬಿಕ್ಕಿ ಬಿಕ್ಕಿ ಅತ್ತ. ಅವನ ತಲೆ ಎದೆಗಾನಿಸಿಕೊಂಡ ಸುಗುಣಳ ಕಂಗಳಿಂದಲೂ ಹನಿಗಳುರುಳಿದವು. ಪ್ರಸಾದ್ ಅವನನ್ನು ಸಂತೈಸಿ ಹೇಗೋ ಅವನ ಊಟ ಪೂರೈಸಿ ಅವನ ಜೊತೆಯೇ ಮಲಗಿದರು.